ಪತ್ರಿಕಾ ತುಣುಕುಗಳು
PAPER CLIPPINGS

ವಿಷಯ : DEPARTMENT / SUBJECT:

ಹೆಸರು : NAME OF THE NEWS PAPER:

ದಿನಾಂಕ : DATE: 13/3/21

# 2+3+4 ಲೆಕ್ಕದ ಗುಟ್ಟು ಏನಿದು ಸೀಕ್ರೆಟ್?

## ಸಿಡಿ ಹಿಂದಿನ ಕತೆ ಬಿಚ್ಚಿಟ್ಟ ರಮೇಶ್ | ಯಶವಂತಪುರ, ಹುಳಿಮಾವಿನಲ್ಲಿ ಷಡ್ಯಂತ್ರ ಆರೋಪ

10-3-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ವಿವಾದದ ಧೂಳೆಬ್ಬಿಸಿದ ಸಿಡಿ ಪ್ರಕರಣದಲ್ಲಿ ಮಂತ್ರಿಸ್ಥಾನ ತ್ಯಾಗಮಾಡಿದ ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ ಸಿಡಿ ಹಿಂದಿನ ಕತೆಗಳನ್ನು ಒಗಟೊಗಟಾಗಿ ಬಹಿರಂಗಪಡಿಸಿದ್ದಲ್ಲದೇ, ತಮ್ಮ ವಿರುದ್ಧ ಷಡ್ಯಂತ್ರ ರೂಪಿಸಿದವರನ್ನು ಕುಟ್ಟಿಕೆಡಹುವ ರೋಷಾವೇಶದ ಮಾತನ್ನಾಡಿದ್ದಾರೆ.



ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಅಜ್ಞಾತವಾಗಿಯೇ ಇದ್ದ ಅವರು ಮಂಗಳವಾರ ಸದಾಶಿವ ನಗರದ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಹಲವು ಸಂಗತಿಗಳನ್ನು ಹಂಚಿಕೊಂಡರು. ಸಿಡಿ ಪ್ರಕರಣದ ಷಡ್ಯಂತ್ರದಲ್ಲಿ ಪಾತ್ರಧಾರಿಗಳ ಸಂಖ್ಯೆಯನ್ನು 2+3+4 ಎಂದು ರಮೇಶ್ ವರ್ಣಿಸಿದ್ದು, ಮಹಿಳೆಯರು, ಪರ್ತಕರ್ತರು, ರಾಜಕಾರಣಿಗಳ ಸಂಖ್ಯೆಯನ್ನು ಅವರು ಈ ರೀತಿ ವರ್ಣಿಸಿದ್ದು, ಇವರನ್ನು ಸುಮ್ಮನೆ ಬಿಡಲ್ಲ ಎಂದರು. ಒಂದು ಹಂತದಲ್ಲಿ ಭಾವೋದ್ವೇಗಕ್ಕೊಳಗಾಗಿ ಕಣ್ಣೀರು ಹರಿಸಿದರು. ಕೆಲವು ಪ್ರಶ್ನೆಗಳಿಗೆ ಹಾರಿಕೆ ಉತ್ತರ ನೀಡಿ ವಿಷಯಾಂತರಕ್ಕೆ ಯತ್ನಿಸಿದರು. 'ನಾನು ತಪ್ಪು ಮಾಡಿಲ್ಲ. ನನ್ನನ್ನು ರಣರಂಗದಲ್ಲಿ ಎದುರಿಸಲು ಇವರಿಗೆ ಸಾಧ್ಯವಿಲ್ಲ. ಹೀಗಾಗಿ ಈ ರೀತಿ ಪಿತೂರಿ ಮಾಡಿದ್ದಾರೆ' ಎಂದು ಹೇಳಿದ ಅವರು, ಸಿಡಿ ಬಿಡುಗಡೆಗೆ 24 ತಾಸು ಮೊದಲೇ ದೆಹಲಿಯಿಂದ ಫೋನ್ ಬಂದಿತ್ತು. ಆದರೆ, ನಾನು ತಪ್ಪು ಮಾಡಿಲ್ಲದ್ದರಿಂದ ಧೈರ್ಯವಾಗಿದ್ದೆ ಎಂದರು.

ಸಿಡಿ ಪ್ರಕರಣದಲ್ಲಿ ರಮೇಶ್ ಜಾರಕಿಹೊಳಿ ಹೇಳಿಕೆ ಅಲ್ಲಗಳೆಯಲು ಸಾಧ್ಯವಿಲ್ಲ. ಒಬ್ಬ ಮಂತ್ರಿ ವಿರುದ್ಧ ಕಾರ್ಯಾಚರಣೆ ನಡೆಸಿದ್ದಾರೆಂದರೆ ಸಣ್ಣವರಲ್ಲ. ದೊಡ್ಡ ದೊಡ್ಡ ಕೈಗಳೇ ಇವೆ. ಸೂಕ್ತ ತನಿಖೆ ಆಗಬೇಕು. ಇದು ವೈಯಕ್ತಿಕ ದ್ವೇಷವೋ, ರಾಜಕೀಯ ದ್ವೇಷವೋ ಎಂಬುದು ತನಿಖೆ ಬಳಿಕ ಗೊತ್ತಾಗಲಿದೆ.

| ಬಿ.ವೈ.ವಿಜಯೇಂದ್ರ ಬಿಜೆಪಿ ಉಪಾಧ್ಯಕ್ಷ

ಜಾರಕಿಹೊಳಿ ಹೇಳಿದ 2+3+4 ಸೂತ್ರ




### ಶೋ ಪೀಸ್ ಬಿಡಲ್ಲ

ಮಂಗಳವಾರ ಮಧ್ಯಾಹ್ನ ಎರಡನೇ ಬಾರಿಗೆ ಮಾಧ್ಯಮವನ್ನು ಎದುರಿಸಿದ ರಮೇಶ್ ಜಾರಕಿಹೊಳಿ ಶೋ ಪೀಸ್‌ಗಳನ್ನು ಸುಮ್ಮನೆ ಬಿಡಲ್ಲ. ತಮ್ಮ ಕುಟುಂಬದ ತೇಜೋವಧೆ ಮಾಡಿದವರನ್ನು ಎಷ್ಟೇ ಕೋಟಿ ಖರ್ಚಾದರೂ ನಾವು ಬಿಡಲ್ಲ. ಷಡ್ಯಂತ್ರ ಮಾಡಿದವರಿಗೆ ಪಾಠ ಕಲಿಸುತ್ತೇವೆ. ಅವರನ್ನು ಹೇಗೆ ಸೋಲಿಸಬೇಕೆಂದು ಗೊತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಮುಂದೇನು ಮಾಡಬೇಕೆಂದು ಸುಪ್ರೀಂಕೋರ್ಟ್ ವಕೀಲರನ್ನು ಸಂಪರ್ಕಿಸಿದ್ದೇವೆ. ನಿವೃತ್ತ ನ್ಯಾಯಮೂರ್ತಿಯವರ ಸಲಹೆ ಪಡೆಯಲಾಗಿದೆ. ಷಡ್ಯಂತ್ರ ಬಯಲು ಮಾಡಲು ಕಾನೂನಾತ್ಮಕ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ನಾವು ಹೈದ್ರಾಬಾದ್ ಕರ್ನಾಟಕ, ಉತ್ತರ ಕರ್ನಾಟಕದವರು ಕೀಳು ಮಟ್ಟದ ರಾಜಕಾರಣ ಮಾಡಲ್ಲ ಎಂದ ಅವರು ಕನಕಪುರ, ಬೆಳಗಾವಿ ರಾಜಕಾರಣದ ಷಡ್ಯಂತ್ರ ಮಾಡಿದ್ದಾರೆಂದು ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ. ಅದರ ಬಗ್ಗೆ ನಾನೇನು ಹೇಳಲ್ಲ, ಇದ್ದರೂ ಇರಬಹುದು ಎಂದರು.

### ಯುವತಿಗೆ 5 ಕೋಟಿ

ಆ ಯುವತಿಗೆ 50 ಲಕ್ಷ ರೂ. ಕೊಟ್ಟಿದ್ದಾರೆ ಎಂದು ಬಾಲಚಂದ್ರ ಜಾರಕಿಹೊಳಿ ಹೇಳಿದ್ದರು, ನನ್ನ ಮಾಹಿತಿಯ ಪ್ರಕಾರ 5 ಕೋಟಿ ರೂ. ಕೊಟ್ಟಿದ್ದಾರೆ ಹಾಗೂ ಆಕೆಗೆ ವಿದೇಶದಲ್ಲಿ ಒಂದು ಅಪಾರ್ಟ್‌ಮೆಂಟ್ ಕೂಡ ಕೊಟ್ಟಿದ್ದಾರೆ ಎಂಬ ಮಾಹಿತಿ ಇದೆ. ಆದರೆ, ಅದು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ತನಿಖೆಯಿಂದ ಎಲ್ಲ ಗೊತ್ತಾಗಲಿದೆ ಎಂದರು. ನಾನು ಸಚಿವನಾದಾಗ ನನಗೆ ಈ ಇಲಾಖೆ ನಡೆಸಲು ಆಗುವುದಿಲ್ಲ, ಮೂರು ತಿಂಗಳಲ್ಲಿ ಹೊರಬರುತ್ತಾನೆ ಎಂದು ಒಬ್ಬ ಮಹಾನ್ ನಾಯಕ ಹೇಳಿದ್ದ. ನಾನು ಇಲಾಖೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ ತೋರಿಸಿದೆ. ಅದಕ್ಕಾಗಿ ಸಹಿಸಿಕೊಳ್ಳದೇ ಈ ಷಡ್ಯಂತ್ರ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಯಡಿಯೂರಪ್ಪನವರು ನನಗೆ ಆತ್ಮಸ್ಥೈರ್ಯ ತುಂಬಿದರು ಎಂದು ಇದೇ ವೇಳೆ ಸ್ಮರಿಸಿದರು.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಪ್ರಕರಣದ ಕುರಿತು ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಬಗ್ಗೆ ಬುಕ್ ಆಫ್ ಲಾ ಪ್ರಕಾರ ತನಿಖೆ ನಡೆಸಲಾಗುವುದು. ಎಲ್ಲ ವಿಚಾರಣೆ ಕಾನೂನು ಪ್ರಕಾರ ನಡೆಯುತ್ತದೆ.

| ಬಸವರಾಜ ಬೊಮ್ಮಾಯಿ
ಗೃಹ ಸಚಿವ

ದಿನೇಶ ಕಲ್ಲಹಳ್ಳಿ ದೂರು ಹಿಂಪಡೆದ ವಿಚಾರದಲ್ಲಿ ಒತ್ತಡ ಏನಿದೆ ಗೊತ್ತಿಲ್ಲ. ಇದು ಸಂಶಯಗಳಿಗೆ ಕಾರಣ ವಾಗಿದೆ. ನನ್ನ ಬಳಿ ಸಿಡಿಗಳಿವೆ ಎಂದು ಹೇಳಿಲ್ಲ. ನನ್ನ ಹೇಳಿಕೆ ದಾಖಲೆ ಇದ್ದರೆ ತೋರಿಸಿ.

| ರಾಜಶೇಖರ ಮುಲಾಲಿ
ಸಾಮಾಜಿಕ ಹೋರಾಟಗಾರ

### ದೂರು ಹಿಂಪಡೆಯುವುದಾಗಿ ತಿಳಿಸಿದ ದಿನೇಶ್

ಮಾಜಿ ಸಚಿವರ ಲೈಂಗಿಕ ವಿವಾದ ಸಂಬಂಧ ಮಂಗಳವಾರ ಸಂಜೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಹಾಜರಾಗಿ ದೂರನ್ನು ಹಿಂಪಡೆಯುವುದಾಗಿ ಪೊಲೀಸರಿಗೆ ತಿಳಿಸಿದ್ದಾರೆ. ಈ ಕುರಿತು 'ವಿಜಯವಾಣಿ' ಜತೆ ಮಾತನಾಡಿದ ದಿನೇಶ್ ಕಲ್ಲಹಳ್ಳಿ, ನನ್ನ ವಕೀಲರು ಈ ಹಿಂದೆ ಪೊಲೀಸ್ ಠಾಣೆಗೆ ಬಂದು ದೂರು ಹಿಂಪಡೆಯುವುದಾಗಿ ಪೊಲೀಸರಿಗೆ ತಿಳಿಸಿದ್ದರು. ದೂರು ಹಿಂಪಡೆಯುವ ಬಗ್ಗೆ ಪತ್ರದ ಮೂಲಕವೂ ಪೊಲೀಸರಿಗೆ ವಕೀಲರು ತಿಳಿಸಿದ್ದರು. ಇದೀಗ ಸ್ವತಃ ನಾನೇ ಠಾಣೆಗೆ ಹಾಜರಾಗಿ ದೂರು ಹಿಂಪಡೆಯುವುದಾಗಿ ಪೊಲೀಸರಿಗೆ ತಿಳಿಸಿದ್ದೇನೆ ಎಂದು ತಿಳಿಸಿದ್ದಾರೆ.